ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 4, September-October 2025, Pp. 81-87
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಅಭಿವೃದ್ಧಿ ಮತ್ತು ಶಿಕ್ಷಣ

**ಶ್ರೀ ಯಮನಪ್ಪ ತಂದೆ ಬಸಪ್ಪ ಮತ್ತು ಡಾ. ಎಸ್.ಎ. ಗೋವರ್ಧನ**
ಸಂಶೋಧನಾ ವಿದ್ಯಾರ್ಥಿ, ಸಹಾಯಕ ಪ್ರಾಧ್ಯಾಪಕರು
ಗ್ರಾಮೀಣಾಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿಸ್ತರಣಾ ಕೇಂದ್ರ ದೇವದುರ್ಗ

***Abstract:***
*ಅಭಿವೃದ್ಧಿ ಮತ್ತು ಶಿಕ್ಷಣ ಇವೆರಡು ಪರಸ್ಪರ ಅವಿನಾಭಾವ ಸಂಬಂಧ ಹೊಂದಿರುವಂತಹ ಪ್ರಮುಖವಾದ ಅಂಶಗಳಾಗಿವೆ. ಇವು ಒಂದಕ್ಕೊಂದು ಪೂರಕವಾಗಿದೆ. ಶಿಕ್ಷಣವಿಲ್ಲದೆ ಅಭಿವೃದ್ಧಿ ಸಾಧ್ಯವಿಲ್ಲ. ಅಭಿವೃದ್ಧಿ ಇಲ್ಲದೆ ಶಿಕ್ಷಣಕ್ಕೆ ಪೂರಕವಾದ ವಾತಾವರಣ ಲಭಿಸಲು ಸಾಧ್ಯವಿಲ್ಲ. ಸಮಾಜ, ಆರ್ಥಿಕತೆ ಮತ್ತು ರಾಷ್ಟ್ರದ ಪ್ರಗತಿಯು ಶಿಕ್ಷಣದ ಮೇಲೆ ಅವಲಂಬಿತವಾಗಿದೆ. ಸಮಾಜದ ಪ್ರತಿಯೊಬ್ಬ ನಾಗರಿಕರಿಗೂ ಶಿಕ್ಷಣದ ಅಗತ್ಯವಿದೆ. ಶಿಕ್ಷಣವು ವ್ಯಕ್ತಿಯ ವೈಯಕ್ತಿಕ ಹಾಗೂ ಸಾಮಾಜಿಕ ಬದುಕಿನಲ್ಲಿ ಬೆಳವಣಿಗೆಗೆ ಕಾರಣವಾಗುತ್ತದೆ. ಅಭಿವೃದ್ಧಿಯೆಂದರೆ ಸಮಗ್ರ ಪ್ರಗತಿ. ಅಂದರೆ ಆರ್ಥಿಕ, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಉನ್ನತಿ ಸಾಧಿಸುವುದಾಗಿದೆ.*

***Keywords:*** *ಅಭಿವೃದ್ಧಿ, ಆರ್ಥಿಕ ಅಭಿವೃದ್ಧಿ, ಸಾಮಾಜಿಕ ಸಮಾನತೆ, ಶೈಕ್ಷಣಿಕ ಅಭಿವೃದ್ಧಿ.*

## ಪೀಠಿಕೆ

ಶಿಕ್ಷಣವು ಅಭಿವೃದ್ಧಿಗೆ ಮೂಲಾಧಾರವಾಗಿದೆ. ಅಂದರೆ ಉತ್ತಮವಾದ ಶಿಕ್ಷಣವನ್ನು ಪಡೆದ ನಾಗರಿಕರು ಉತ್ತಮವಾದ ಉದ್ಯೋಗಗಳ ಅವಕಾಶ ಬಳಸಿಕೊಂಡು ಆರ್ಥಿಕವಾಗಿ ಬಲಿಷ್ಠರಾಗುತ್ತಾರೆ. ಅಷ್ಟೇ ಅಲ್ಲದೆ ಶಿಕ್ಷಣವು ಮಹಿಳಾ ಸಬಲೀಕರಣ, ಜನಸಂಖ್ಯಾ ನಿಯಂತ್ರಣ, ಆರೋಗ್ಯ ಜಾಗೃತಿ ಮುಂತಾದ ಸಾಮಾಜಿಕ ಸುಧಾರಣೆಗೆ ಕಾರಣವಾಗಿದೆ. ಒಟ್ಟಾರೆ ರಾಷ್ಟ್ರದ ಅಭಿವೃದ್ಧಿಯಲ್ಲಿ ಶಿಕ್ಷಣವು ಪ್ರಮುಖವಾದ ಪಾತ್ರ ವಹಿಸುತ್ತದೆ.

ಶಿಕ್ಷಣ ಮತ್ತು ಅಭಿವೃದ್ಧಿಯ ನಡುವಿನ ಸಂಬಂಧ ಮೂಲ ಸ್ಥಂಭವಾಗಿದೆ. ಆದ್ದರಿಂದಾಗಿ ಶಿಕ್ಷಣವಿಲ್ಲದೆ ಯಾವುದೇ ರಾಷ್ಟ್ರದ ಸಮಗ್ರ ಪ್ರಗತಿಯು ಅಸಾಧ್ಯವಾದುದ್ದಾಗಿದೆ. ಇದರಿಂದಾಗಿ ಅಭಿವೃದ್ಧಿ ಎಂಬ ಗುರಿಯನ್ನು ಸಾಧಿಸಲು ಶಿಕ್ಷಣ ಪ್ರಮುಖವಾದ ಸಾಧನವಾಗಿದೆ. ಪ್ರಸ್ತುತ ದಿನಮಾನಗಳಲ್ಲಿ ಅಭಿವೃದ್ಧಿಯು ತಾಂತ್ರಿಕತೆಯೊಂದಿಗೆ ಸಾಗುತ್ತಿದೆ ಎಂದರೆ ಅದು ಶಿಕ್ಷಣದಿಂದ ಮಾತ್ರವೇ ಸಾಧ್ಯವಾಗಿದೆ.

## ಅಭಿವೃದ್ಧಿಯಲ್ಲಿ ಶಿಕ್ಷಣದ ಪಾತ್ರ

ಅಭಿವೃದ್ಧಿ ಮತ್ತು ಶಿಕ್ಷಣ ಇವೆರಡು ಮಾನವ ಸಮಾಜದ ಮೂಲಭೂತ ಅಂಶಗಳಾಗಿವೆ. ಅಂದರೆ ಅಭಿವೃದ್ಧಿ ಮತ್ತು ಶಿಕ್ಷಣ ಒಂದಕ್ಕೊಂದು ಪೂರಕವಾದ ಅಂಶಗಳಾಗಿವೆ. ಇವು ಒಂದು ನಾಣ್ಯದ ಎರಡು ಮುಖಗಳಂತೆ ಕಾರ್ಯನಿರ್ವಹಿಸುತ್ತವೆ. ರಾಷ್ಟ್ರದ ಪ್ರತಿಯೊಂದು ಕ್ಷೇತ್ರದಲ್ಲಿನ ಬೆಳವಣಿಗೆ, ಸುಧಾರಣೆ ಇನ್ನಿತರ ಕಾರಣಗಳಿಗೆ ಶಿಕ್ಷಣವು ಪ್ರಮುಖವಾದ ಸಾಧನವಾಗಿದೆ.

***Please cite this article as:*** ಶ್ರೀ ಯಮನಪ್ಪ ತಂದೆ ಬಸಪ್ಪ ಮತ್ತು ಎಸ್.ಎ. ಗೋವರ್ಧನ. (2025). ಅಭಿವೃದ್ಧಿ ಮತ್ತು ಶಿಕ್ಷಣ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(4), 81–87

ಅಭಿವೃದ್ಧಿಯೆಂದರೆ ಸಾಮಾನ್ಯವಾಗಿ ಪ್ರತಿಯೊಂದು ರಾಷ್ಟ್ರದ ಬೆಳವಣಿಗೆ, ಸರ್ವತೋಮುಖ ಬೆಳವಣಿಗೆಯಾಗಿದೆ. ಅಂದರೆ ಮಾನವ ಮತ್ತು ಸಮಾಜದ ಸಮಗ್ರ ಪ್ರಗತಿಯಲ್ಲಿ ಆರ್ಥಿಕ, ಸಾಮಾಜಿಕ, ರಾಜಕೀಯ ಮುಂತಾದವುಗಳನ್ನು ಸಮತೋಲನದಲ್ಲಿ ಬೆಳೆಸುವುದಾಗಿದೆ. ಮಾನವ ಜೀವನದ ವಿವಿಧ ಕ್ಷೇತ್ರಗಳಾದ ವ್ಯಕ್ತಿಯ ಜೀವನ ಮಟ್ಟ, ಸಾಮಾಜಿಕ ವ್ಯವಸ್ಥೆ, ಆರ್ಥಿಕ ಪರಿಸ್ಥಿತಿ, ಶಿಕ್ಷಣ, ಆರೋಗ್ಯ, ತತ್ವಜ್ಞಾನ ಮುಂತಾದವುಗಳಲ್ಲಿ ಗುಣಾತ್ಮಕ ಮತ್ತು ಪರಿಮಾಣಾತ್ಮಕ ಬದಲಾವಣೆಗಳು ಸಂಭವಿಸಿದಾಗ ಅವುಗಳನ್ನು ಸಮತೋಲನ ಸ್ಥಿತಿಗೆ ಸಧಾಸುವುದೇ ಅಭಿವೃದ್ಧಿಯಾಗಿದೆ.

**ಅಭಿವೃದ್ಧಿಯ ಪ್ರಮುಖ ಅಂಶಗಳ**

ಆರ್ಥಿಕ ಅಭಿವೃದ್ಧಿ, ಸಾಮಾಜಿಕ ಅಭಿವೃದ್ಧಿ, ಶೈಕ್ಷಣಿಕ ಅಭಿವೃದ್ಧಿ, ಸಾಂಸ್ಕೃತಿಕ ಅಭಿವೃದ್ಧಿ ಮತ್ತು ತಾಂತ್ರಿಕ ಅಭಿವೃದ್ಧಿ

**ಆರ್ಥಿಕ ಅಭಿವೃದ್ಧಿ**

ದೇಶದ ಆರ್ಥಿಕ ವ್ಯವಸ್ಥೆಯ ಪ್ರಗತಿ ಹೊಂದುವುದು. ಜನರ ಜೀವನ ಮಟ್ಟವನ್ನು ಸುಧಾರಿಸುವುದಾಗಿದೆ. ಅಂದರೆ ಆದಾಯ, ಉದ್ಯೋಗ, ಉತ್ಪಾದನೆ, ಮುಂತಾದವುಗಳ ಪ್ರಗತಿ ಸಾಧಿಸುವುದಾಗಿದೆ. ಅಭಿವೃದ್ಧಿಯೆಂದರೆ ಕೇವಲ ದೇಶದ ಆರ್ಥಿಕ ಪ್ರಗತಿ ಮಾತ್ರವಲ್ಲದೆ ಸಾಮಾಜಿಕ ಮತ್ತು ಮಾನವೀಯ ಅಭಿವೃದ್ಧಿಯೂ ಒಳಗೊಂಡಿರುವ ವಿಶಾಲವಾದ ಪ್ರಕ್ರಿಯೆಯಾಗಿದೆ. ಇದು ಜನರ ಜೀವನದ ಗುಣಮಟ್ಟವನ್ನು ಉತ್ತಮಗೊಳಿಸುವ ಮತ್ತು ಬಡತನ. ದಾರಿದ್ರ್ಯವನ್ನು ಕಡಿಮೆ ಮಾಡುವ, ಹೆಚ್ಚಿನ ಪ್ರಮಾಣದಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಮತ್ತು ಉತ್ಪಾದನಾ ಸಾಮರ್ಥ್ಯವನ್ನು ವೃದ್ಧಿಸುವ ದೀರ್ಘಕಾಲೀನ ಬದಲಾವಣೆಯಾಗಿದೆ. ಉದಾಹರಣೆಗೆ ಕೃಷಿಯಲ್ಲಿ ಹೊಸ ತಂತ್ರಜ್ಞಾನದ ಅಳವಡಿಕೆಯಿಂದ ಉತ್ಪಾದನೆಯನ್ನು ಹೆಚ್ಚಿಸುವುದು, ಕೈಗಾರಿಕೆಗಳು ಮತ್ತು ಕಾರ್ಖಾನೆಗಳನ್ನು ಸ್ಥಾಪಿಸುವುದರ ಮೂಲಕ ಹೆಚ್ಚಿನ ಪ್ರಮಾಣದಲ್ಲಿ ಉದ್ಯೋಗಗಳನ್ನು ಸೃಷ್ಟಿಸುವುದು, ಜನರ ಆದಾಯಮಟ್ಟ ಹೆಚ್ಚಿಸುವುದು, ಸಾರಿಗೆ ಸಂಪರ್ಕ, ಆರೋಗ್ಯ, ಶಿಕ್ಷಣ ಇತ್ಯಾದಿ ಕ್ಷೇತ್ರಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಸುಧಾರಿಸುವುದಾಗಿದೆ.

**ಸಾಮಾಜಿಕ ಅಭಿವೃದ್ಧಿ**

ಸಾಮಾಜಿಕ ಅಭಿವೃದ್ಧಿಯೆಂಬುದು ಸಮಾಜದ ಸಂಸ್ಕೃತಿ, ಪರಂಪರೆ, ಶಿಕ್ಷಣ, ಆರೋಗ್ಯ, ಸಮಾನತೆ ಮತ್ತು ಮಾನವ ಹಕ್ಕುಗಳು ಸೇರಿದಂತೆ ವಿವಿಧ ಅಂಶಗಳಲ್ಲಿ ಆಗುವ ಗುಣಾತ್ಮಕ ಬದಲಾವಣೆ. ಇದರಿಂದ ವ್ಯಕ್ತಿಗಳು ಪರಸ್ಪರ ಸಹಕಾರ, ಸಹಹಬಾಳ್ವೆ, ಪರಸ್ಪರ ಗೌರವ ಮತ್ತು ಸಮಾನತೆಯ ಭಾವನೆ ಬೆಳೆಸಿಕೊಳ್ಳುವುದಾಗಿದೆ. ಅಂದರೆ ಸಮಾಜದ ಒಟ್ಟು ಜೀವನದ ಮಟ್ಟ, ನೈತಿಕತೆ, ಸಹಕಾರ, ಸಮಾನತೆ, ನ್ಯಾಯ ಮತ್ತು ಮಾನವ ಸಂಬಂಧಗಳಲ್ಲಿ ಉನ್ನತಿ ಸಾಧಿಸುವ ಪ್ರಕ್ರಿಯೆಯಾಗಿದೆ. ವ್ಯಕ್ತಿ ಮತ್ತು ಸಮಾಜದ ಜೀವನದಲ್ಲಿ ಸಾಮಾಜಿಕ ಮೌಲ್ಯಗಳು ಬೆಳೆಯುವಂತೆ ಮಾಡುವ ಬದಲಾವಣೆಯೆ ಸಾಮಾಜಿಕ ಅಭಿವೃದ್ಧಿಯಾಗಿದೆ.

ಸಮಾಜದಲ್ಲಿ ಸಮಾನತೆ ಮತ್ತು ಬಾಂಧವ್ಯವನ್ನು ನಿರ್ಮಿಸುವುದು, ಬಡತನ, ಅಸಮಾನತೆ, ಅಜ್ಞಾನ ಇತ್ಯಾದಿಗಳನ್ನು ನಿರ್ಮೂಲ ಮಾಡುವುದು, ಮಾನವ ಹಕ್ಕುಗಳು ಮತ್ತು ಸಾಮಾಜಿಕ ನ್ಯಾಯವನ್ನು ಸ್ಥಾಪಿಸುವುದು, ಹಾಗೂ ಸಮಗ್ರ ಮಾನವ ಅಭಿವೃದ್ಧಿಗೆ ನೆರವಾಗುವುದು ಈ ಸಾಮಾಜಿಕ ಅಭಿವೃದ್ಧಿಯ ಮುಖ್ಯ ಉದ್ದೇಶವಾಗಿದೆ.

ಸಾಮಾಜಿಕ ಅಭಿವೃದ್ಧಿಯು ಕೇವಲ ಆರ್ಥಿಕ ಪ್ರಗತಿ ಮಾತ್ರವಲ್ಲದೆ ಮಾನವ ಜೀವನದ ಗುಣಮಟ್ಟದಲ್ಲಿ ಬದಲಾವಣೆ ತರಿಸುವ ಸಾಮಾಜಿಕ ಪ್ರಕ್ರಿಯೆಯಾಗಿದೆ. ಇದು ಸಮಾಜವನ್ನು ಹೆಚ್ಚು ಸಹನಭೂತಿಪೂರ್ಣ, ಸಮಾನತೆ ಮತ್ತು ಶಾಂತಿಯುತವಾಗಿಸಲು ಇದು ಸಹಕಾರಿಯಾಗಿದೆ.

**ಶೈಕ್ಷಣಿಕ ಅಭಿವೃದ್ಧಿ**

ಶೈಕ್ಷಣಿಕ ಅಭಿವೃದ್ಧಿಯೆಂಬುದು ವ್ಯಕ್ತಿಯ ಮಾನಸಿಕ, ಬೌದ್ಧಿಕ, ನೈತಿಕ, ಸಾಮಾಜಿಕ ಮತ್ತು ಶಾರೀರಿಕ ಬೆಳವಣಿಗೆಯನ್ನು ಶಿಕ್ಷಣದ ಮೂಲಕ ಸಾಧಿಸುವುದಾಗಿದೆ. ಅಂದರೆ ಇದು ಕೇವಲ ಪಾಠ ಕಲಿಯುವುದಕ್ಕೆ ಅಲ್ಲದೆ ವ್ಯಕ್ತಿಯ ಸಂಪೂರ್ಣ ವ್ಯಕ್ತಿತ್ವ ನಿರ್ಮಾಣಕ್ಕೆ ಸಹಕಾರಿಯಾಗಿದೆ. ಅಂದರೆ ವ್ಯಕ್ತಿಯ ಶಿಕ್ಷಣದ ಮಟ್ಟ, ಜ್ಞಾನ, ಕೌಶಲ್ಯ, ಮೌಲ್ಯ ಮತ್ತು ಚಿಂತನೆಗಳಲ್ಲಿ ಉನ್ನತಿ ಸಾಧಿಸುವ ಪ್ರಕ್ರಿಯೆಯಾಗಿದೆ. ಶಿಕ್ಷಣದ ಮೂಲಕ ವ್ಯಕ್ತಿ ಸಮಾಜದಲ್ಲಿ ನೈತಿಕತೆ, ಬುದ್ಧಿವಂತಿಕೆ ಮತ್ತು ಸಾಮಾಜಿಕ ಹೊಣೆಗಾರಿಕೆಯ ಬೆಳವಣಿಗೆ ಸಾಧ್ಯವಾಗುತ್ತದೆ.

ಜ್ಞಾನದ ವಿಸ್ತರಣೆ, ಕೌಶಲ್ಯಾಭಿವೃದ್ಧಿ, ನೈತಿಕ ಮೌಲ್ಯಗಳ ಬೆಳವಣಿಗೆ, ಸಾಮಾಜಿಕ ಹೊಣೆಗಾರಿಕೆ, ವ್ಯಕ್ತಿತ್ವ ನಿರ್ಮಾಣ ಇವು ಶೈಕ್ಷಣಿಕ ಅಭಿವೃದ್ಧಿಯ ಪ್ರಮುಖ ಉದ್ದೇಶಗಳಾಗಿವೆ.

ಒಟ್ಟಾರೆಯಾಗಿ ಹೇಳುವುದಾದರೆ ವ್ಯಕ್ತಿಯಲ್ಲಿನ ಬೌದ್ಧಿಕ ಮತ್ತು ನೈತಿಕ ಸಾಮರ್ಥ್ಯಗಳನ್ನು ವೃದ್ಧಿಸುವ ಮೂಲಕ ಸಮಗ್ರ ಮಾನವೀಯ ಅಭಿವೃದ್ಧಿಯನ್ನು ಸಾಧಿಸುವ ಪ್ರಕ್ರಿಯೆಯಾಗಿದೆ. ಅಲ್ಲದೆ ಇದು ವ್ಯಕ್ತಿಯ ಯಶಸ್ಸು ಮತ್ತು ರಾಷ್ಟ್ರದ ಪ್ರಗತಿಯ ಮೂಲಾಧಾರವಾಗಿದೆ.

**ಸಾಂಸ್ಕೃತಿಕ ಅಭಿವೃದ್ಧಿ**

ಒಂದು ಸಮಾಜದ ಸಂಸ್ಕೃತಿ, ಪರಂಪರೆ, ಮೌಲ್ಯಗಳು, ನೈತಿಕತೆ, ಕಲೆ, ಸಾಹಿತ್ಯ, ಸಂಗೀತ, ಧರ್ಮ. ಭಾಷೆ ಮತ್ತು ಜೀವನಶೈಲಿಯಲ್ಲಿ ಉಂಟಾಗುವ ಉನ್ನತಿ ಹಾಗೂ ಪರಿವರ್ತನೆಯಾಗಿದೆ. ಅಂದರೆ ಜನರು ತಮ್ಮ ಹಳೆಯ ಸಂಸ್ಕೃತಿಯನ್ನು ಕಾಪಾಡಿಕೊಂಡು ಕಾಲದ ಅವಶ್ಯಕತೆಗಳಿಗೆ ಅನುಗುಣವಾಗಿ ಹೊಸ ಸಂಸ್ಕೃತಿಯ ಅಂಶಗಳನ್ನು ಅಳವಡಿಸಿಕೊಂಡು ಜೀವನವನ್ನು ಉತ್ತಮಗೊಳಿಸುವ ಪ್ರಕ್ರಿಯೆಯೇ ಸಾಂಸ್ಕೃತಿಕ ಅಭಿವೃದ್ಧಿಯಾಗಿದೆ.

ಭಾಷೆ ಮತ್ತು ಸಾಹಿತ್ಯದ ಬೆಳವಣಿಗೆ, ಕಲೆ ಮತ್ತು ಸಂಗೀತದ ಪ್ರಗತಿ, ನೈತಿಕ ಮತ್ತು ಸಾಮಾಜಿಕ ಮೌಲ್ಯಗಳು, ಪರಂಪರೆ ಮತ್ತು ಆಚರಣೆಗಳ ಸಂರಕ್ಷಣೆ ಹಾಗೂ ಸಾಂಸ್ಕೃತಿಕ ವಿನಿಮಯ ಇವು ಸಂಸ್ಕೃತಿಕ ಅಭಿವೃದ್ಧಿಯ ಪ್ರಮುಖ ಅಂಶಗಳಾಗಿವೆ.

**ತಾಂತ್ರಿಕ ಅಭಿವೃದ್ಧಿ**

ಮಾನವನ ಜೀವನವನ್ನು ಸುಲಭ ವೇಗವಾಗಿ ಮತ್ತು ಪರಿಣಾಮಕಾರಿಯಾಗಿ ಮಾಡುವುದಲ್ಲದೆ ಹೊಸ ತಂತ್ರಜ್ಞಾನ, ಯಂತ್ರೋಪಕರಣ ಹಾಗೂ ವೈಜ್ಞಾನಿಕ ಆವಿಷ್ಕಾರಗಳಲ್ಲಿ ಪ್ರಗತಿ ಸಾಧಿಸುವುದಾಗಿದೆ. ಅಂದರೆ ವಿಜ್ಞಾನವನ್ನು ಆಧಾರವನ್ನಾಗಿಸಿಕೊಂಡು ಹೊಸ ತಾಂತ್ರಿಕ ವಿಧಾನಗಳನ್ನು ಕಂಡು ಹಿಡಿದು ಅದನ್ನು ಜೀವನದ ವಿವಿಧ ಕ್ಷೇತ್ರಗಳಲ್ಲಿ ಬಳಸುವುದನ್ನು ತಾಂತ್ರಿಕ ಅಭಿವೃದ್ಧಿ ಎನ್ನಲಾಗಿದೆ.

ಆವಿಷ್ಕಾರ ಮತ್ತು ಸಂಶೋಧನೆಗಳು, ಉದ್ಯಮ ಮತ್ತು ಉತ್ಪಾದನೆಯಲ್ಲಿ ಸುಧಾರಣೆ, ಸಂಚಾರ ಮತ್ತು ಸಂವಹನದಲ್ಲಿ ಕ್ರಾಂತಿ, ಶಿಕ್ಷಣ ಮತ್ತು ವೈದ್ಯಕೀಯ ಕ್ಷೇತ್ರದಲ್ಲಿ ಪ್ರಗತಿ, ಕೃಷಿ ಮತ್ತು ಕೈಗಾರಿಕೆಗಳಲ್ಲಿ ಹೊಸ ವಿಧಾನಗಳ ಅಳವಡಿಕೆ ಮುಂತಾದವುಗಳು ತಾಂತ್ರಿಕ ಅಭಿವೃದ್ಧಿಯ ಪ್ರಮುಖ ಅಂಶಗಳಾಗಿವೆ. ಉದಾಹರಣೆಗೆ ಕಂಪ್ಯೂಟರ್ ಮತ್ತು ಇಂಟರ್ನೆಟ್ ಆವಿಷ್ಕಾರ, ಮೊಬೈಲ್ ಫೋನ್, ರೋಬೋಟ್‌ಗಳು, ಕೃತಕ ಬುದ್ಧಿಮತ್ತೆ, ವೈದ್ಯಕೀಯ ಕ್ಷೇತ್ರದಲ್ಲಿ ಸಲಕರಣೆಗಳು, ವಿದ್ಯುತ್ ವಾಹನಗಳು, ಡ್ರೋನ್‌ಗಳು ಹಾಗೂ ಸೌರಶಕ್ತಿ ಇತ್ಯಾದಿಗಳು.

ಒಟ್ಟಾರೆಯಾಗಿ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಬಳಸಿ ಮಾನವ ಜೀವನವನ್ನು ಸುಧಾರಿಸುವ, ಉತ್ಪಾದಕತೆ ಹೆಚ್ಚಿಸುವ ಮತ್ತು ಸಮಾಜದ ಪ್ರಗತಿಗೆ ಮಾರ್ಗದರ್ಶನ ನೀಡುವಂತಹ ಪ್ರಕ್ರಿಯೆಯಾಗಿದೆ. ಇದು ದೇಶದ ಆರ್ಥಿಕ, ಸಾಮಾಜಿಕ, ಹಾಗೂ ಶೈಕ್ಷಣಿಕ ಅಭಿವೃದ್ಧಿಗೆ ಪ್ರಮುಖವಾದ ಆಸ್ತಿಯಾಗಿದೆ.

ಮಾನವ ಜೀವನದ ಗುಣಮಟ್ಟವನ್ನು ಹೆಚ್ಚಿಸುವುದು ಅಂದರೆ ಪ್ರತಿಯೊಬ್ಬರೂ ಉತ್ತಮ ಶಿಕ್ಷಣ, ಆರೋಗ್ಯ, ಉದ್ಯೋಗ ಮತ್ತು ಮಾನವೀಯ ಮೌಲ್ಯಗಳಿಂದ ಕೂಡಿದ ಜೀವನವನ್ನು

ನಡೆಸಬೇಕೆಂಬುದು ಅಭಿವೃದ್ಧಿಯ ಮುಖ್ಯ ಉದ್ದೇಶವಾಗಿದೆ.

ಒಟ್ಟಾರೆಯಾಗಿ ಅಭಿವೃದ್ಧಿ ಎಂದರೆ ಮಾನವ ಮತ್ತು ಸಮಾಜದ ಗುಣಮಟ್ಟದ ಜೀವನದ ಕಡೆಗೆ ಮುನ್ನಡೆಯುವ ಪ್ರಕ್ರಿಯೆಯಾಗಿದೆ. ಇದು ಕೇವಲ ಭೌತಿಕ ಬದಲಾವಣೆಗಳಲ್ಲದೆ ಮಾನವೀಯ ಮೌಲ್ಯಗಳು, ಶಿಕ್ಷಣ, ನೀತಿ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಒಳಗೊಂಡಿರುವುದಾಗಿದೆ. ಪ್ರತಿಯೊಬ್ಬರಿಗೂ ಸಮಾನ ಅವಕಾಶಗಳು ದೊರೆಯುವ ನ್ಯಾಯ ಸಮ್ಮತ ಮತ್ತು ಮಾನವೀಯತೆಯೆಡಗೆ ಸಮಾಜದ ನಿರ್ಮಾಣವಾಗುವುದಾಗಿದೆ.

**ಶಿಕ್ಷಣದಲ್ಲಿ ಅಭಿವೃದ್ಧಿಯ ಪಾತ್ರ**

ಶಿಕ್ಷಣವೆಂದರೆ ವ್ಯಕ್ತಿಯ ಮನಸ್ಸು, ಬುದ್ಧಿ, ನೈತಿಕತೆ ಮತ್ತು ಕೌಶಲ್ಯಗಳನ್ನು ಬೆಳೆಸುವ ಜೀವನದ ಪ್ರಕ್ರಿಯೆಯಾಗಿದೆ. ಅಂದರೆ ಇದು ವ್ಯಕ್ತಿಯನ್ನು ಕೇವಲ ಜ್ಞಾನಿಯನ್ನಾಗಿಸುವುದಲ್ಲ, ಬದಲಾಗಿ ಜವಾಬ್ದಾರಿಯುತ, ನೈತಿಕ ಮತ್ತು ಸೃಜನಾತ್ಮಕ ನಾಗರಿಕರನ್ನಾಗಿ ರೂಪಿಸುವಂಥದ್ದಾಗಿದೆ. ಇದು ಕೇವಲ ಪುಸ್ತಕದ ಪಾಠವಲ್ಲ, ವ್ಯಕ್ತಿಜೀವನದ ಎಲ್ಲಾ ಆಯಾಮಗಳಲ್ಲಿ ವ್ಯಕ್ತಿಯ ಸಮಗ್ರ ಅಭಿವೃದ್ಧಿಗೆ ಇದು ಪ್ರಮುಖವಾದ ಸಾಧನವಾಗಿದೆ. ಪ್ರತಿಯೊಬ್ಬ ವ್ಯಕ್ತಿಯು ಶಿಕ್ಷಣದ ಮೂಲಕ ತನ್ನಲ್ಲಿರುವ ಶಕ್ತಿ, ಜ್ಞಾನ, ಹಾಗೂ ಸೃಜನಶೀಲತೆಯನ್ನು ಅಭಿವೃದ್ಧಿಪಡಿಸಿಕೊಂಡು ಶಿಸ್ತುಬದ್ಧ ಸಮಾಜ ನಿರ್ಮಾಣದಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತಾನೆ.

**ಅಭಿವೃದ್ಧಿ ಮತ್ತು ಶಿಕ್ಷಣ**

ಶಿಕ್ಷಣವು ಮಾನವ ಜೀವನದ ಅವಿಭಾಜ್ಯ ಅಂಗವಾಗಿದೆ. ಅದು ಕೇವಲ ಪುಸ್ತಕದ ಜ್ಞಾನ ನೀಡುವುದಿಲ್ಲ. ಬದಲಾಗಿ ವ್ಯಕ್ತಿಯ ಒಳಗಿನ ಶಕ್ತಿಯನ್ನು ಬೆಳಗಿಸುವ, ಸಮಾಜಕ್ಕೆ ಒಬ್ಬ ಒಳ್ಳೆಯ ನಾಗರಿಕನನ್ನಾಗಿ ಮಾಡಿ ರೂಪಿಸುವಂತಹ ಸಾಧನವಾಗಿದೆ. ಅಭಿವೃದ್ಧಿ ಎಂಬ ಪದವು ಮಾನವ ಜೀವನದ ಎಲ್ಲಾ ಕ್ಷೇತ್ರಗಳಿಗೆ ಸಂಬಂಧಿಸಿದ್ದಾಗಿದೆ. ಇದು ಕೇವಲ ಆರ್ಥಿಕ ಅಥವಾ ತಾಂತ್ರಿಕ ಪ್ರಗತಿಯನ್ನು ಮಾತ್ರ ಸೂಚಿಸುವುದಲ್ಲ. ಬದಲಾಗಿ ಇದು ವ್ಯಕ್ತಿಯ ಬೌದ್ಧಿಕ, ನೈತಿಕ, ಸಾಮಾಜಿಕ ಹಾಗೂ ಮಾನವೀಯ ಗುಣಗಳ ಸಮಗ್ರ ಬೆಳವಣಿಗೆಯನ್ನು ಒಳಗೊಂಡಿದೆ. ಇವುಗಳ ಬೆಳವಣಿಗೆ ಮೂಲ ಮತ್ತು ಮಾರ್ಗದರ್ಶಕ ಶಕ್ತಿ ಎಂದರೆ ಅದು ಶಿಕ್ಷಣ. ಇದರಿಂದಾಗಿ ಅಭಿವೃದ್ದಿ ಪ್ರಕ್ರಿಯೆಯಲ್ಲಿ ಶೈಕ್ಷಣಿಕ ದೃಷ್ಟಿಕೋನವು ಅತ್ಯಂತ ಪ್ರಮುಖ ಸ್ಥಾನವನ್ನು ಪಡೆದುಕೊಂಡಿದೆ.

ಶೈಕ್ಷಣಿಕ ದೃಷ್ಟಿಯಿಂದ ಅಭಿವೃದ್ಧಿಯನ್ನು ನೋಡುವುದಾದರೆ ಮಾನವ ಸಮಾಜದಲ್ಲಿ ಶಿಕ್ಷಣವು ಅತ್ಯಂತ ಪ್ರಮುಖವಾದ ಅಂಶವಾಗಿದೆ. ಶಿಕ್ಷಣವಿಲ್ಲದೆ ವ್ಯಕ್ತಿಯ ಸೌಕರ್ಯ, ಸಾಮರ್ಥ್ಯ ಮತ್ತು ಸಮಗ್ರ ಬೆಳವಣಿಗೆ ಸಾಧ್ಯವಿಲ್ಲ. ಅದೇ ರೀತಿ ರಾಷ್ಟ್ರದ ಹಾಗೂ ಸಮಾಜದ ಅಭಿವೃದ್ಧಿಗೂ ಶಿಕ್ಷಣ ಅವಿಭಾಜ್ಯ ಅಂಗವಾಗಿ ಪಾತ್ರವಹಿಸುತ್ತದೆ. ನಿರ್ಣಯ ಸಾಮರ್ಥ್ಯ ಮತ್ತು ಹೊಣೆಗಾರಿಕೆಯಂತಹ ಜವಾಬ್ದಾರಿಗಳನ್ನು ಬೆಳೆಯಲು ಸಹಾಯ ಮಾಡುತ್ತದೆ. ಶಿಕ್ಷಣದ ಮೂಲಕ ಪ್ರತಿಯೊಬ್ಬರು ತಮ್ಮ ಶಕ್ತಿ ಮತ್ತು ಸಾಮರ್ಥ್ಯಗಳನ್ನು ಅರಿತುಕೊಂಡು ತಮ್ಮ ಜೀವನದ ಗುರಿಗಳನ್ನು ಸಾಧಿಸಲು ಪ್ರತಿಯೊಬ್ಬರಲ್ಲಿಯೂ ಆತ್ಮವಿಶ್ವಾಸ ಮತ್ತು ಸ್ವಯಂ ಪ್ರೇರಣೆಗಳಂತಹ ಗುಣಗಳನ್ನು ಅಭಿವೃದ್ಧಿಪಡಿಸುತ್ತದೆ. ಇದರಿಂದಾಗಿ ಶಿಕ್ಷಣವು ವ್ಯಕ್ತಿ, ಸಮಾಜ ಮತ್ತು ರಾಷ್ಟ್ರದ ಅಭಿವೃದ್ಧಿಯ ಆಧಾರಸ್ತಂಭವೆಂದರೆ ತಪ್ಪಾಗಲಾರದು. ಶಿಕ್ಷಣವಿಲ್ಲದೆ ಅಭಿವೃದ್ಧಿ ಸಾಧ್ಯವಿಲ್ಲ ಹಾಗೆಯೇ ಅಭಿವೃದ್ಧಿ ಇಲ್ಲದೆ ಶಿಕ್ಷಣ ಪರಿಪೂರ್ಣತೆ ಹೊಂದಲು ಸಾಧ್ಯವಿಲ. ಆದ್ದರಿಂದ ಶಿಕ್ಷಣ ಮತ್ತು ಅಭಿವೃದ್ಧಿ ಪರಸ್ಪರ ಪೂರಕವಾಗಿವೆ. ಇವು ಒಂದರ ಪ್ರಗತಿಯು ಇನ್ನೊಂದರ ಬೆಳವಣಿಗೆಗೆ ದಾರಿ ತೋರುವುದಾಗಿದೆ.

**ಅಭಿವೃದ್ಧಿ ಮತ್ತು ಶಿಕ್ಷಣದ ಪರಸ್ಪರ ಸಂಬಂಧ**

ಮಾನವ ಜೀವನದಲ್ಲಿ ಅಭಿವೃದ್ಧಿ ಮತ್ತು ಶಿಕ್ಷಣ ಇವು ಎರಡು ಅತ್ಯಂತ ಪ್ರಮುಖವಾದ ಅಂಶಗಳಾಗಿವೆ. ಇವು ಮಾನವನ ವ್ಯಕ್ತಿತ್ವ, ಸಮಾಜ

ಮತ್ತು ರಾಷ್ಟ್ರದ ಪ್ರಗತಿಯನ್ನು ನಿರ್ಧರಿಸುವಂತಹ ಪ್ರಮುಖವಾದ ಶಕ್ತಿಗಳಾಗಿವೆ. ಶಿಕ್ಷಣವಿಲ್ಲದೆ ಅಭಿವೃದ್ಧಿ ಅಸಾಧ್ಯ. ಅಭಿವೃದ್ಧಿ ಇಲ್ಲದೆ ಶಿಕ್ಷಣ ಫಲಿತಾಂಶವು ಪರಿಪೂರ್ಣವಾಗುವುದಿಲ್ಲ. ಇದರಿಂದಾಗಿ ಈ ಎರಡು ಅಂಶಗಳು ಒಂದನ್ನೊಂದು ಅವಲಂಬನೆಗೊಂಡಿವೆ. ಇವುಗಳ ಅರ್ಥ, ಉದ್ದೇಶ ಮತ್ತು ಪರಿಣಾಮಗಳಲ್ಲಿ ಕೆಲವು ವ್ಯತ್ಯಾಸಗಳನ್ನು ಕಾಣಬಹುದಾಗಿದೆ. ಈ ವ್ಯತ್ಯಾಸಗಳನ್ನು ತಿಳಿದುಕೊಳ್ಳುವುದರಿಂದ ಈ ಎರಡು ಪ್ರಮುಖ ಅಂಶಗಳ ಸಂಬಂಧವನ್ನು ಅರಿತುಕೊಳ್ಳಬಹುದಾಗಿದೆ.

ಅಭಿವೃದ್ಧಿಯು ಸಮಾಜ ಅಥವಾ ರಾಷ್ಟ್ರದ ಎಲ್ಲಾ ಕ್ಷೇತ್ರಗಳಲ್ಲಿ ಉಂಟಾಗುವ ಸಮಗ್ರ ಪ್ರಗತಿ. ಇದು ಆರ್ಥಿಕ, ಸಾಮಾಜಿಕ, ತಾಂತ್ರಿಕ, ಸಾಂಸ್ಕೃತಿಕ ಮತ್ತು ಮಾನವೀಯ ಪ್ರಗತಿಯ ರೂಪದಲ್ಲಿರುತ್ತದೆ. ಅಭಿವೃದ್ಧಿ ಎನ್ನುವಂತಹದ್ದು ಫಲಿತಾಂಶ ರೂಪವಾಗಿರುತ್ತದೆ. ಅಂದರೆ ಇದು ವ್ಯಕ್ತಿ ಅಥವಾ ಸಮಾಜವು ಉತ್ತಮವಾದ ಜೀವನಮಟ್ಟ ಸಾಧಿಸುವುದನ್ನು ಸೂಚಿಸುತ್ತದೆ. ಅಂದರೆ ಸ್ಥಿತಿಗತಿಯ ಬದಲಾವಣೆ. ಉದಾಹರಣೆಗೆ ಹಿಂದುಳಿದ ಸ್ಥಿತಿಯಿಂದ ಹಿಡಿದು ಮುಂದುವರೆದ ಅಥವಾ ಮುಂದುವರೆಯುತ್ತಿರುವ ಸ್ಥಿತಿಯ ಕುರಿತು ತಿಳಿಸುವಂತಹ ಪ್ರಕ್ರಿಯೆಯಾಗಿದೆ.

ಶಿಕ್ಷಣವು ಮಾನವನ ಒಳಗಿನ ಶಕ್ತಿಗಳನ್ನು ಅರಿತು ಅವುಗಳನ್ನು ಬೆಳೆಸುವಂತಹ ಪ್ರಕ್ರಿಯೆಯಾಗಿದೆ. ಇದು ಕೇವಲ ಪುಸ್ತಕದ ಜ್ಞಾನವನ್ನು ಅಲ್ಲದೆ ವ್ಯಕ್ತಿಯ ಬೌದ್ಧಿಕ, ಭಾವನಾತ್ಮಕ, ನೈತಿಕ ಮತ್ತು ಸಾಮಾಜಿಕ ವಿಕಾಸವನ್ನು ಒಳಗೊಂಡಿದ್ದು ಇದು ಮಾನವನ ಜೀವನಕ್ಕೆ ದಾರಿ ತೋರುತ್ತದೆ. ವ್ಯಕ್ತಿಯ ವ್ಯಕ್ತಿತ್ವವನ್ನು ರೂಪಿಸುತ್ತದೆ. ಮತ್ತು ಸಮಾಜದ ಬದಲಾವಣೆಗೆ ಇದು ಮಾರ್ಗದರ್ಶಕವಾಗಿರುತ್ತದೆ.

ಅಭಿವೃದ್ಧಿ ಮತ್ತು ಶಿಕ್ಷಣಗಳೆರಡು ಪರಸ್ಪರ ಸಂಬಂಧ ಹೊಂದಿದ್ದರೂ ಇವುಗಳ ನಡುವೆ ಕೆಲವು ವ್ಯತ್ಯಾಸಗಳು ಕಂಡುಬರುತ್ತವೆ. ಅಭಿವೃದ್ಧಿ ಎಂಬುದು ಒಂದು ಫಲಿತಾಂಶವಾಗಿ ಕಂಡು ಬಂದರೆ, ಶಿಕ್ಷಣವು ಅದರ ಪ್ರಕ್ರಿಯೆಯಾಗಿ ಕಂಡು ಬರುತ್ತದೆ. ಅಭಿವೃದ್ಧಿಯು ಒಂದು ಅಳೆಯಬಹುದಾದ ಪರಿಕಲ್ಪನೆಯಾಗಿದೆ. ಆದರೆ ಶಿಕ್ಷಣವು ಮಾನವೀಯ ಮೌಲ್ಯಗಳನ್ನು ಒಳಗೊಂಡಂತಹ ಅನುಭಾವಾತ್ಮಕ ಪ್ರಕ್ರಿಯೆಯಾಗಿದೆ. ಅಭಿವೃದ್ಧಿಯು ಸಮಾಜ, ರಾಷ್ಟ್ರ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಬದಲಾವಣೆಗಳನ್ನು ತರುವಂತದ್ದಾಗಿದೆ. ಶಿಕ್ಷಣವು ವ್ಯಕ್ತಿಯ ಮನೋವಿಕಾಸ, ನೈತಿಕತೆ ಮತ್ತು ಬೌದ್ಧಿಕ ಶಕ್ತಿಯನ್ನು ಬೆಳೆಸುತ್ತದೆ. ಅಭಿವೃದ್ಧಿಯು ಹೊರಗಿನ ಪ್ರಗತಿಯನ್ನು ತೋರಿಸುತ್ತದೆ. ಆದರೆ ಶಿಕ್ಷಣವು ಒಳಗಿನ ವಿಕಾಸವನ್ನು ಪ್ರತಿಪಾದಿಸುತ್ತದೆ. ಅಭಿವೃದ್ಧಿ ಕೆಲವೊಮ್ಮೆ ಕೇವಲ ಭೌತಿಕ ಪ್ರಗತಿಗೆ ಮಾತ್ರ ಸೀಮಿತವಾಗಬಹುದಾಗಿದೆ. ಆದರೆ ಶಿಕ್ಷಣವು ಮೌಲ್ಯಾಧಾರಿತ ಜೀವನವನ್ನು ನಿರ್ಮಿಸುತ್ತದೆ. ಶಿಕ್ಷಣದ ಗುಣಮಟ್ಟವೇ ಅಭಿವೃದ್ಧಿಯ ಮಟ್ಟವನ್ನು ನಿರ್ಧರಿಸುತ್ತದೆ ಎಂಬುದು ಸತ್ಯವಾದ ಮಾತಾಗಿದೆ. ಉತ್ತಮವಾದ ಶಿಕ್ಷಣವನ್ನು ಪಡೆದಿರುವಂತಹ ನಾಗರಿಕರಿಂದಲೇ ನಿಜವಾದ ಅಭಿವೃದ್ಧಿ ಸಾಧ್ಯವಾಗುತ್ತದೆ.

ಶಿಕ್ಷಣವು ಅಭಿವೃದ್ಧಿಗೆ ದಾರಿದೀಪವಾಗಿದೆ. ಶಿಕ್ಷಣದಿಂದ ವ್ಯಕ್ತಿಯ ಜ್ಞಾನ, ಕೌಶಲ್ಯ, ನೈತಿಕತೆ, ಹಾಗೂ ಸಾಮಾಜಿಕ ಬದ್ಧತೆ ಬೆಳೆಯುತ್ತದೆ. ಈ ಗುಣಗಳಿಂದ ವ್ಯಕ್ತಿಯು ತನ್ನ ಜೀವನವನ್ನು ಸುಧಾರಿಸಿಕೊಂಡು ಸಮಾಜದ ಪ್ರಗತಿಯಲ್ಲಿ ಪಾಲ್ಗೊಳ್ಳುತ್ತಾನೆ. ಶಿಕ್ಷಣದಿಂದ ಮಾನವ ಸಂಪನ್ಮೂಲ ಅಭಿವೃದ್ಧಿಯಾಗುತ್ತದೆ. ಅದು ಆರ್ಥಿಕ ಪ್ರಗತಿಯ ಮೂಲವಾಗಿ ಮಾರ್ಪಡುತ್ತದೆ. ಇದರಿಂದಾಗಿ ಶಿಕ್ಷಣವು ಅಭಿವೃದ್ಧಿಯ ಪ್ರೇರಕ ಶಕ್ತಿಯೆಂದರೆ ತಪ್ಪಾಗಲಾರದು.

**ಸಾಮಾಜಿಕ ಅಭಿವೃದ್ಧಿಯಲ್ಲಿ ಶಿಕ್ಷಣದ ಪಾತ್ರ**

ಶಿಕ್ಷಣವು ಸಮಾಜದ ಪ್ರಗತಿಗೆ ಮೂಲ ಸ್ತಂಭವಾಗಿದೆ. ಶಿಕ್ಷಣವು ಸಹಬಾಳ್ವೆ, ಸಹಕಾರ, ಸಾಮಾಜಿಕ ಸಮಾನತೆ ಹಾಗೂ ಮಾನವೀಯ ಮೌಲ್ಯಗಳನ್ನು ಬೋಧಿಸುತ್ತದೆ. ಶಿಕ್ಷಣದ

ಪ್ರಭಾವದಿಂದಾಗಿ ಸಮಾಜದಲ್ಲಿ ಅಸಮಾನತೆ, ಅಜ್ಞಾನ, ಶೋಷಣೆ ಹಾಗೂ ಹಿಂದುಳಿದಿರುವಿಕೆಯನ್ನು ದೂರ ಮಾಡಲು ಸಾಧ್ಯವಾಗುತ್ತದೆ. ಅಂದರೆ ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಮತ್ತು ನ್ಯಾಯದ ಸ್ಥಾಪನೆಗೆ ಶಿಕ್ಷಣವು ಪ್ರಮುಖವಾದ ಸಾಧನವಾಗಿದೆ. ಸಾಮಾಜಿಕ ಬದಲಾವಣೆಯು ಶಿಕ್ಷಣದ ಮೂಲಕ ಸಾಧ್ಯವಾಗುತ್ತದೆ.

**ಆರ್ಥಿಕ ಅಭಿವೃದ್ಧಿಯಲ್ಲಿ ಶಿಕ್ಷಣದ ಪಾತ್ರ**

ಶಿಕ್ಷಣವು ರಾಷ್ಟ್ರದ ಆರ್ಥಿಕ ಬೆಳವಣಿಗೆಗೆ ಕೀಲಿ ಕೈ ಎಂದರೆ ತಪ್ಪಾಗಲಿಕ್ಕಿಲ್ಲ. ಶಿಕ್ಷಣದ ಮೂಲಕ ಮಾನವ ಸಂಪನ್ಮೂಲವು ಅಭಿವೃದ್ಧಿಯಾಗುತ್ತದೆ. ಅಂದರೆ ನೈಪುಣ್ಯತೆ, ತಾಂತ್ರಿಕ ಜ್ಞಾನ ಮತ್ತು ವಿಜ್ಞಾನಾಧಾರಿತ ಶಿಕ್ಷಣವು ಉದ್ಯೋಗಾವಕಾಶಗಳನ್ನು ವೃದ್ಧಿಸುತ್ತದೆ. ಉತ್ತಮ ಶಿಕ್ಷಣವನ್ನು ಪಡೆದ ಯುವಕ ಯುವತಿಯರು ಸ್ವಾವಲಂಬಿಗಳಾಗಿ ಬದುಕಲು ಶಿಕ್ಷಣವು ಸಹಕಾರಿಯಾಗಿದೆ. ಅಂದರೆ ಉದ್ಯೋಗದಲ್ಲಿ ತೊಡಗಿ ರಾಷ್ಟ್ರದ ಉತ್ಪಾದಕ ಶಕ್ತಿಯನ್ನು ಹೆಚ್ಚಿಸುತ್ತಾರೆ. ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣದ ಪ್ರಭಾವದಿಂದ ದೇಶದ ಆರ್ಥಿಕತೆಯು ಬಲಗೊಳ್ಳುತ್ತದೆ. ಹೀಗಾಗಿ ಶಿಕ್ಷಣವು ಆರ್ಥಿಕ ಪ್ರಗತಿಯ ಅವಿಭಾಜ್ಯ ಅಂಗವಾಗಿದೆ.

**ನೈತಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಯಲ್ಲಿ ಶಿಕ್ಷಣದ ಪಾತ್ರ**

ಶಿಕ್ಷಣವು ಕೇವಲ ಜ್ಞಾನ ನೀಡುವುದಷ್ಟೇ ಅಲ್ಲದೆ ಪ್ರತಿಯೊಬ್ಬರಲ್ಲಿಯೂ ಅದು ನೈತಿಕತೆ ಮತ್ತು ಮೌಲ್ಯಗಳನ್ನು ರೂಪಿಸುವುದಾಗಿದೆ. ಸತ್ಯ, ಧರ್ಮ, ಶಾಂತಿ, ಪ್ರೀತಿ, ಸಹಾನುಭೂತಿ ಮತ್ತು ಕ್ಷಮೆ ಮುಂತಾದ ಮೌಲ್ಯಗಳನ್ನು ಶಿಕ್ಷಣವು ಬೋಧಿಸುತ್ತದೆ. ಸಾಂಸ್ಕೃತಿಕ ದೃಷ್ಟಿಯಿಂದ ಶಿಕ್ಷಣವು ಪುರಾತನ ಪರಂಪರೆ ಮತ್ತು ಸಂಸ್ಕೃತಿಯನ್ನು ಉಳಿಸಿ ಹೊಸ ವಿಚಾರಗಳನ್ನು ಸ್ವೀಕರಿಸಲು ವ್ಯಕ್ತಿಯನ್ನು ಪ್ರೇರೇಪಿಸುತ್ತದೆ. ಇಂತಹ ಶಿಕ್ಷಣದಿಂದ ಸಂಸ್ಕೃತಿ, ಶಾಂತಿಯುತ ಮತ್ತು ಮಾನವೀಯ ಸಮಾಜದ ನಿರ್ಮಾಣ ಸಾಧ್ಯವಾಗುತ್ತದೆ.

**ರಾಷ್ಟ್ರದ ಅಭಿವೃದ್ಧಿಯಲ್ಲಿ ಶಿಕ್ಷಣದ ಪಾತ್ರ**

ಒಂದು ರಾಷ್ಟ್ರದ ನಿಜವಾದ ಶಕ್ತಿಯು ಅದರ ಶಿಕ್ಷಣ ವ್ಯವಸ್ಥೆಯಲ್ಲಿದೆ. ಶಿಕ್ಷಣದ ಮಟ್ಟ ಎಷ್ಟು ಉನ್ನತವಾಗಿದೆಯೋ ರಾಷ್ಟ್ರದ ಪ್ರಗತಿಯು ಅಷ್ಟೇ ವೇಗವಾಗಿರುತ್ತದೆ. ಶಿಕ್ಷಣವು ರಾಷ್ಟ್ರದಲ್ಲಿ ವಿಜ್ಞಾನ, ತಂತ್ರಜ್ಞಾನ, ಆವಿಷ್ಕಾರ ಮತ್ತು ಸಾಮಾಜಿಕ ಬದಲಾವಣೆಗಳಿಗೆ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತದೆ. ಶೈಕ್ಷಣಿಕ ದೃಷ್ಟಿಯಿಂದ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ವಿಶ್ವದ ಮುಂಚೂಣಿಯಲ್ಲಿವೆ. ಆದ್ದರಿಂದ ರಾಷ್ಟ್ರದ ಸಮಗ್ರ ಅಭಿವೃದ್ಧಿಗೆ ಶಿಕ್ಷಣ ಅತಿ ಅವಶ್ಯಕವಾದ ಅಂಶವಾಗಿದೆ.

ಒಟ್ಟಾರೆಯಾಗಿ ಅಭಿವೃದ್ಧಿಯಲ್ಲಿ ಶೈಕ್ಷಣಿಕ ದೃಷ್ಟಿಕೋನವು ವ್ಯಕ್ತಿ, ಸಮಾಜ ಮತ್ತು ರಾಷ್ಟ್ರದ ಸಮಗ್ರ ಬೆಳವಣಿಗೆಯ ಮೂಲಾಧಾರವಾಗಿದೆ. ಶಿಕ್ಷಣವು ಕೇವಲ ಪಾಠ ಪುಸ್ತಕದ ವಿಷಯವಲ್ಲ. ಶಿಕ್ಷಣದ ಪ್ರಭಾವದಿಂದ ವ್ಯಕ್ತಿಯು ಜ್ಞಾನಪೂರ್ಣ, ನೈತಿಕ ಹಾಗೂ ಮಾನವೀಯ ಗುಣಗಳಿಂದ ಕೂಡಿದ ನಾಗರಿಕನಾಗುತ್ತಾನೆ. ಇಂತಹ ವ್ಯಕ್ತಿಗಳಿಂದಲೇ ಸಮಾಜ ಹಾಗೂ ರಾಷ್ಟ್ರದ ನಿಜವಾದ ಅಭಿವೃದ್ಧಿಯ ದಾರಿದೀಪ ಮತ್ತು ರಾಷ್ಟ್ರಗಳ ಪ್ರಗತಿಯ ಮೂಲ ಸ್ಥಂಭವಾಗಿದೆ. ಅಂದರೆ ಶಿಕ್ಷಣವು ಮನುಷ್ಯನೊಳಗಿನ ಶಕ್ತಿಗಳನ್ನು ಬೆಳೆಸುವ ಸಾಧನವಾದರೆ, ಅಭಿವೃದ್ಧಿಯು ಇದರ ದೃಶ್ಯರೂಪವಾಗಿದೆ. ಇದರಿಂದಾಗಿ ಶಿಕ್ಷಣವೇ ಮಾನವನ ಸಮಗ್ರ ವಿಕಾಸದ ದಾರಿ ತೋರಿಸುವ ಬೆಳಕಾಗಿದೆ.

ಶಿಕ್ಷಣವು ಅಭಿವೃದ್ಧಿಯ ಪ್ರಗತಿಗೆ ಅತ್ಯಂತ ಪ್ರಭಾವ ಬೀರುವ ಅಂಶವಾಗಿದೆ. ಅಂದರೆ ಉತ್ತಮ ಶಿಕ್ಷಣ ಪಡೆದ ವ್ಯಕ್ತಿಯು ತನ್ನ ಜೀವನವನ್ನು ಸುಧಾರಿಸಿಕೊಂಡು ಸಮಾಜದ ಹಿತಾಸಕ್ತಿಗೆ ಶ್ರಮಿಸುತ್ತಾನೆ. ಈ ಶಿಕ್ಷಣದಿಂದ ವ್ಯಕ್ತಿಯು ನೈತಿಕ ಕೌಶಲ್ಯ, ತಾಂತ್ರಿಕ ಜ್ಞಾನ, ವಿಚಾರಶೀಲತೆ ಮತ್ತು ಮೌಲ್ಯಗಳನ್ನು ಪಡೆದಿರುತ್ತಾನೆ. ಇಂತಹ ಗುಣಗಳಿಂದ

ಆ ವ್ಯಕ್ತಿಯು ಸಮಾಜದ ಬದಲಾವಣೆಗೆ ಕಾರಣನಾಗುತ್ತಾನೆ. ಶಿಕ್ಷಣವು ಮಾನವ ಸಂಪನ್ಮೂಲವನ್ನು ಬೆಳೆಸುವುದರಿಂದಾಗಿ ಆರ್ಥಿಕ ಪ್ರಗತಿಯು ಸಾಧ್ಯವಾಗುತ್ತದೆ. ವಿಜ್ಞಾನ ಮತ್ತು ತಂತ್ರಜ್ಞಾನ ಶಿಕ್ಷಣವು ರಾಷ್ಟ್ರದ ಅಭಿವೃದ್ಧಿಯನ್ನು ಇನ್ನಷ್ಟು ವೇಗಗೊಳಿಸುತ್ತದೆ. ಇದರಿಂದಾಗಿ ಶಿಕ್ಷಣವನ್ನು ಅಭಿವೃದ್ಧಿಯ ಬುನಾದಿ ಎಂದು ಹೇಳಬಹುದಾಗಿದೆ.

**ಸಮಾರೋಪ**

ಒಟ್ಟಾರೆಯಾಗಿ ಶಿಕ್ಷಣ ಮತ್ತು ಅಭಿವೃದ್ಧಿಗಳೆರಡು ಪರಸ್ಪರ ಅವಲಂಬಿತವಾದ ಎರಡು ಶಕ್ತಿಗಳಾಗಿವೆ. ಶಿಕ್ಷಣ ಅಭಿವೃದ್ಧಿಗೆ ಭದ್ರ ಬುನಾದಿಯಾಗಿದೆ ಮತ್ತು ಅಭಿವೃದ್ಧಿಯು ಶಿಕ್ಷಣದ ಫಲಿತಾಂಶವಾಗಿ ಬೆಳವಣಿಗೆ ಹೊಂದುತ್ತದೆ. ಶಿಕ್ಷಣವಿಲ್ಲದೆ ಅಭಿವೃದ್ಧಿಯು ಸಾಧ್ಯವಿಲ್ಲ ಮತ್ತು ಅಭಿವೃದ್ಧಿ ಇಲ್ಲದೆ ಶಿಕ್ಷಣವು ನಿರರ್ಥಕವಾಗುತ್ತದೆ ಆದ್ದರಿಂದ ವ್ಯಕ್ತಿ, ಸಮಾಜ ಹಾಗೂ ರಾಷ್ಟ್ರದ ನಿಜವಾದ ಪ್ರಗತಿಗಾಗಿ ಶಿಕ್ಷಣ ಮತ್ತು ಅಭಿವೃದ್ಧಿ ಎರಡು ಅಂಶಗಳನ್ನು ಸಮತೋಲನಯುತವಾಗಿ ಬೆಳೆಸುವುದು ಅಗತ್ಯವಾಗುತ್ತದೆ. ಶಿಕ್ಷಣವೇ ಅಭಿವೃದ್ಧಿಯ ಆತ್ಮ. ಅಭಿವೃದ್ದಿಯೇ ಶಿಕ್ಷಣದ ಪ್ರತಿಫಲ. ಇವೆರಡು ಪರಸ್ಪರ ಪೂರಕವಾಗಿದ್ದು ಮಾನವನ ಸಮಗ್ರ ಪ್ರಗತಿಗೆ ಅವಿಭಾಜ್ಯ ಅಂಶಗಳಾಗಿವೆ.

**ಪರಾಮರ್ಶನ ಗ್ರಂಥಗಳು**


- ಭಾಗ್ಯಮ್ಮ, ಎನ್. (2016). *ಶಿಕ್ಷಣ ಮತ್ತು ಅಭಿವೃದ್ಧಿ*. ನಿರುತ ಪಬ್ಲಿಕೇಷನ್.
- ಚಂದ್ರಶೇಖರ್, ಟಿ.ಆರ್. (2014). *ಮಾನವ ಅಭಿವೃದ್ಧಿ, ಮಾನವ ಬಡತನ ಮತ್ತು ಮಾನವ ಹಕ್ಕುಗಳು.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ರಾವ್, .ಕೆ.ಆರ್.ವಿ.(2019). *ಶಿಕ್ಷಣ ಮತ್ತು ಮಾನವ ಸಂಪನ್ಮೂಲ.* (ಅನು, ಗಿರಿಜಮ್ಮ.ಎಂ.ವಿ) ರಾಷ್ಟ್ರೀಯ ಅನುವಾದ ಮಿಷನ್, ಕೇಂದ್ರೀಯ ಭಾರತೀಯ ಭಾಷಾ ಸಂಸ್ಥಾನ,
- ಶಿವಯ್ಯ, ಎಸ್. (2007). *ಉದಯೋನ್ಮುಖ ಭಾರತದಲ್ಲಿ ಶಿಕ್ಷಣ.* ಪ್ರಜಾ ಪ್ರಕಾಶನ.